ಹರಿಯಲಿದೆ. ಪ್ರತಿ ಹಂತದಲ್ಲೂ 10 ದಿನಗಳಂತೆ ನಿಯಮಾನುಸಾರ ತಾಲ್ಲೂಕಿನ ಎಲ್ಲಾ ಕೆರೆಗಳತ್ತ ಹೇಮೆ ಹರಿಯಲಿದೆ. ಈ ಕಾರ್ಯಕ್ಕೆ ಸಚಿವ ಜೆ.ಸಿ.ಮಾಧುಸ್ವಾಮಿ ಮತ್ತು ಸಂಸದ ಜಿ.ಎಸ್. ಬಸವರಾಜು ಅವರ ಸಾಥ್ ಇದೆ ಎಂದರು.

ಮುಂದಿನ ಡಿಸೆಂಬರ್ ಮಾಹೆಯವರೆಗೆ

ಹರಿಯಲಿರುವ ಹೇಮೆ ಬಹುತೇಕ ಜಿಲ್ಲೆಯ ಎಲ್ಲಾ ಕೆರೆಗೂ ಹರಿಯಲಿದೆ. ನಮ್ಮ ಪಾಲಿನ 24 ಟಿಎಂಸಿ ಸಂಪೂರ್ಣ ಹರಿಯಲಿದೆ. ಕಳೆದ ಬಾರಿ ಮೈತ್ರಿ ಸರ್ಕಾರ ಸಿ.ಎಸ್.ಪುರ ಭಾಗಕ್ಕೆ ನೀರು ಕೊಡುವಲ್ಲಿ ವಿನಾಕಾರಣ ತಡೆ ಮಾಡಿತ್ತು. ಈ ಬಾರಿ ಸರಾಗವಾಗಿ ನೀರು ತಾಲೂಕಿಗೆ ಹರಿಯಲಿದೆ ಎಂದರು.ಈ ಸಂದರ್ಭದಲ್ಲಿ ಮುಖಂಡರಾದ ಬಿ.ಎಸ್. ನಾಗರಾಜು, ಇಡಗೂರುರವಿ, ಭಾನುಪ್ರಕಾಶ್, ಚನ್ನಿಗಪ್ಪ, ಸದಾಶಿವು, ಆಂಜಿನಪ್ಪ, ಹೇಮಾವತಿ ಇಲಾಖೆ ಇಇ ಲಕ್ಷ್ಮೀ ಇದ್ದರು.

ಆಯ್ಕೆಯಾದ ವಿದ್ಯಾರ್ಥಿಗಳ ಅಭಿನಂದಿಸಿ ಮಾತನಾಡಿ, ಕ್ರೀಡೆ ಕೇವಲ ಸೋಲು-ಗೆಲುವಿನ ಪ್ರಶ್ನೆಯಲ್ಲ, ವಿದ್ಯಾರ್ಥಿಗಳ ಏಕಗ್ರಾತೆ ಶಕ್ತಿ ಹೆಚ್ಚಿಸುವ ಶಕ್ತಿಯುತ ಕಲೆಯಾಗಿದೆ ಎಂದರು. ಕೇವಲ ಅಂಕಪಟ್ಟಿಗಳಿಗೋಸ್ಕರ ಓದಿ ಪುಸ್ತಕದ ಹುಳುಗಳಾಗುವವರ ಸಂಖ್ಯೆ ಹೆಚ್ಚುತ್ತಿದೆ, ಆದರೆ ಸಮಾಜದೊಂದಿಗೆ ಮಗುವಿನ ಬೆಳವಣಿಗೆ ತಡೆಗಟ್ಟುತ್ತದೆ. ಮಕ್ಕಳಲ್ಲಿ ಶಿಕ್ಷಕರು ಕಡಿತಗೊಳಿಸಿ ಕ್ರಿಡಾಭಿಮಾನ ಬೆಳೆಸಬೇಕು ಎಂದರು.

ತಾಲೂಕು ಮಟ್ಟದ ಕ್ರೀಡಾ ವಿಭಾಗದಲ್ಲಿ ಭಾಗವಹಿಸಿದ್ದ ವಿಭಾಗಗಳಾದ ಕಬಡ್ಡಿಯಲ್ಲಿ ಪ್ರಥಮ, ಖೋಖೋ ಪ್ರಥಮ, ವಾಲಿಬಾಲ್ ರಿಲೇ ಪ್ರಥಮ, 800 ಮೀಟರ್ ಓಟ ಪ್ರಥಮ, ಗುಂಡು ಎಸೆತ ಪ್ರಥಮ, ಚಕ್ರ ಎಸೆತ ಪ್ರಥಮ, ಹ್ಯಾಮರ್ ಪ್ರ ಥಮ, ಜವ್ಲಿನ್ ಪ್ರಥಮ, ಸ್ಥಾನವನ್ನು ಗಳಿಸಿದ್ದಾರೆ. ಈ ಕ್ರೀಡೆಯಲ್ಲಿ ವಿಜೇತರಾಗಿ ಜಿಲ್ಲಾ ಮಟ್ಟಕ್ಕೆ ಆಯ್ಕೆ ಯಾದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.